# ಧರ್ಮಾಚರಣೆಯ ರಹಸ್ಯ

## ಪ್ರಾತಃ ಸ್ಮರಣೀಯ
## ಶ್ರೀ ವಿದ್ಯಾಮಾನ್ಯ ತೀರ್ಥರು

## ಸಂಧ್ಯಾವಂದನೆಯ ಮಹತ್ವ

ತ್ರೈವರ್ಣಿಕರೆಲ್ಲರೂ ಉಪನಯನವಾದಂದಿನಿಂದ ಪ್ರತಿನಿತ್ಯವೂ ತ್ರೈಕಾಲಿಕ ಸಂಧ್ಯಾವಂದನೆಯನ್ನು ಮಾಡಬೇಕೆಂಬುದಾಗಿ ಶಾಸ್ತ್ರವಚನವಿದೆ.ಇದು ಈ ದಿನದವರೆಗೆ ಸಜ್ಜನರ ಆಚರಣೆಯಲ್ಲಿಯೂ ಸಹ ಇದೆ.ಸಂಧ್ಯಾವಂದನೆಯ ರಹಸ್ಯವನ್ನರಿಯದ ಕೆಲವು ಆಧುನಿಕರು ಸಂಧ್ಯಾವಂದನೆಯನ್ನು ಪರಿತ್ಯಾಗ ಮಾಡಿದ್ದಾರೆ. ಬಹುಪೂರ್ವ ಪರಂಪರೆಯಿಂದ ಬಂದ ಪಿತ್ರಾರ್ಜಿತ ಆಸ್ತಿಯನ್ನೂ ಮನೆ ಮಠಗಳನ್ನೂ ಕಳೆದುಕೊಂಡು ತನಗೂ ತನ್ನ ಮಕ್ಕಳಿಗೂ ಜೀವನೋಪಾಯ ಏನೂ ಇಲ್ಲದಂತೆ ಮಾಡಿಕೊಂಡ ದೌರ್ಭಾಗ್ಯಶಾಲಿ ಪುರುಷನಿಗಿಂತಲೂ ಅನಾದಿಪರಂಪರೆಯಿಂದ ಸಂಧ್ಯಾವಂದನೆಯನ್ನು ತನ್ನ ತಲೆಗೆ ನಿಲ್ಲಿಸಿಬಿಡುವ ಪುರುಷನು ಅತ್ಯಂತ ದೌರ್ಭಾಗ್ಯಶಾಲಿಯೆನಿಸುತ್ತಾನೆ.ಪೂರ್ವಜರೆಲ್ಲರೂ ಮೂರ್ಖರೆಂದೂ, ತಾನೊಬ್ಬನೇ ಸುಧಾಕಾರನೆಂದೂ ತಿಳಿದುಕೊಳ್ಳುವ ಅಂತಹ ಮಹಾಪುರುಷನು ನಿಸ್ಸಂದೇಹವಾಗಿ ಪರಮಾತ್ಮನಿಗೆ ಅಪರಾಧ ಮಾಡಿದವನಾಗುತ್ತಾನೆ.

ಸಂಧ್ಯಾವಂದನೆಯ ರಹಸ್ಯವನ್ನು ವಿಚಾರ ಮಾಡಿದಂತೆಲ್ಲ ಅದರ ಮಹತ್ವವು ಹೆಚ್ಚು ಹೆಚ್ಚಾಗಿ ಸ್ಫುರಿಸುತ್ತದೆ. ಸಂಧ್ಯಾವಂದನೆ ಎಂದರೆ ಸಂಧ್ಯಾಕಾಲದಲ್ಲಿ ಸೂರ್ಯಾಂತರ್ಗತನಾದ, ಪರಮೇಶ್ವರನಾದ,ಶ್ರೀಮನ್ನಾರಾಯಣನಿಗೆ ಮತ್ತು ಅವನ ಪರಿವಾರಭೂತರಾದ ದಿಗ್ ಅಭಿಮಾನಿಗಳಾದ ಬ್ರಹ್ಮರುದ್ರಾದಿಗಳಿಗೆ ಮಾಡುವ ವಂದನೆ ಎಂದರ್ಥ.ಇದಕ್ಕೆ ಅಂಗಭೂತವಾದ ದೇಹೇಂದ್ರಿಯ ಶುದ್ಧಿರೂಪವಾದ ಆಚಮನ,ಪ್ರಾಣಾಯಾಮ, ಮಾರ್ಜನ ಮುಂತಾದವುಗಳು ಸಂಧ್ಯಾವಂದನೆಯಲ್ಲಿಯೇ ಸೇರಿವೆ.

©Poorna Prajna Vidyapeetha, Bangalore

ಸೂರ್ಯೋದಯಕ್ಕೆ ಮುಂಚೆಯೇ ಸುಮಾರು ನಾಲ್ಕೂವರೆ ಘಂಟೆಯ ವೇಳೆಗೆ ಎದ್ದು ವಿದ್ಯುಕ್ತಪ್ರಕಾರದಂತೆ ಸ್ಮೃತ್ತಿಕಾದಿಗಳಿಂದ ಶೌಚವನ್ನು ಮಾಡಿ, ಸ್ನಾನ ಮಾಡಿ ಊರ್ಧ್ವಪುಂಡ್ರ ಚಕ್ರಶಂಖಾದ್ಯಾಂಕಿತನಾಗಿ, ನಕ್ಷತ್ರಗಳು ಇನ್ನೂ ಮಿನುಗುತ್ತಿರುವಾಗಲೇ ಪ್ರಾತಃ ಸಂಧ್ಯೆಯನ್ನು ಆರಂಭಿಸಬೇಕು.ಸಾಯಂಕಾಲದಲ್ಲಿಯೂ ಸಹ ಸೂರ್ಯನಿರುವಾಗಲೇ ಸಾಯಂ ಸಂಧ್ಯೆಯನ್ನು ಆರಂಭಿಸಬೇಕು.ಸಂಧ್ಯಾವಂದನೆಯ ಒಂದು ಮುಖ್ಯವಾದ ಅಂಶ ಸೂರ್ಯನಿಗೆ ಅರ್ಘ್ಯಪ್ರದಾನ.ಸೂರ್ಯೋದಯ ಕಾಲದಲ್ಲಿಯೂ ಸೂರ್ಯಾಸ್ತಕಾಲದಲ್ಲಿಯೂ ಮತ್ತು ಮಧ್ಯಾಹ್ನ ಕಾಲದಲ್ಲಿಯೂ ಸಹ 'ಮಂದೇಹ' ಎಂಬ ಹೆಸರುಳ್ಳ ಸಹಸ್ರಾರು ರಾಕ್ಷಸರು ಸೂರ್ಯನನ್ನು ಸಂಹರಿಸಲು ಬರುತ್ತಾರೆ.ನಾವು ಕೊಡುವ ಮಂತ್ರಪೂತವಾದ ಅರ್ಘ್ಯವು ಅಸ್ತ್ರರೂಪವಾಗಿ ಪರಿಣಮಿಸಿ ಆ ರಾಕ್ಷಸರನ್ನು ನಿವಾರಣೆ ಮಾಡುತ್ತದೆ.ಹಾಗಾದರೆ, ನಾವು ಯಾರೂ ಅರ್ಘ್ಯಪ್ರದಾನವನ್ನೇ ಮಾಡದಿದ್ದರೆ ಸೂರ್ಯೋದಯಾಸ್ತಗಳೇ ಆಗಲಾರದೆಂದಾಗಲೀ ಅಸ್ತವ್ಯಸ್ತವಾಗುತ್ತದೆಂದಾಗಲೀ ಶಂಕಿಸಬಾರದು. ಏಕೆಂದರೆ,ಪರಮಾತ್ಮನು ಸೂರ್ಯನ ರಥದಲ್ಲಿಯೇ ವಾಲಖಿಲ್ಯರೆಂಬ ಸಹಸ್ರಾರು ಮಂದಿ ಋಷಿಗಳಿರುವಂತೆ ವ್ಯವಸ್ಥೆ ಮಾಡಿದ್ದಾನೆ.ಅವರು ತ್ರಿಕಾಲದಲ್ಲಿಯೂ ಸಹ ಸರಿಯಾದ ವೇಳೆಗೆ ಅರ್ಘ್ಯ ಪ್ರದಾನ ಮಾಡುವುದರಿಂದ ರಾಕ್ಷಸ ನಿವಾರಣೆಯಾಗುತ್ತದೆ.ಅವರಿಂದಲೇ ರಾಕ್ಷಸನಿವಾರಣೆಯಾಗುವ ಪಕ್ಷಕ್ಕೆ ನಾವು ಅರ್ಘ್ಯ ಪ್ರದಾನ ಮಾಡುವ ಅವಶ್ಯಕತೆ ಏನೆಂದು ಕುಚೋದ್ಯ ಮಾಡಬಹುದು.ಆದರೆ ಅದು ಸರಿಯಲ್ಲ.ಹೇಗೆ ಒಂದು ಮನೆಗೆ ಬೆಂಕಿ ಬಿದ್ದಾಗ, ಊರಿನವರೆಲ್ಲಾ ಆರಿಸುವ ಪ್ರಯತ್ನಮಾಡುವದನ್ನು ನೋಡಿ, ಅವರೇ ಆರಿಸುತ್ತಾರೆ ನಾನೇಕೆ ಹೋಗಬೇಕು? ಎಂದು ಯೋಚಿಸಿ ತನ್ನ ಮನೆಯಲ್ಲಿಯೇ ಕುಳಿತ ಮನುಷ್ಯನು ಅನಾಗರಿಕನೂ,ಅಪರಾಧಿಯೂ ಆಗುತ್ತಾನೋ ಹಾಗೆಯೇ ಅರ್ಘ್ಯ ಪ್ರದಾನ ಮಾಡಿ ರಾಕ್ಷಸನಿವಾರಣೆಯಲ್ಲಿ ನೆರವಾಗುವುದು ನಮ್ಮ ಕರ್ತವ್ಯವೂ ಆಗಿರುತ್ತದೆ.ಸ್ತ್ರೀ ಶೂದ್ರರೂ ಸಹ ಸೂರ್ಯಾಂತರ್ಗನಾದ ಪರಮಾತ್ಮನನ್ನು ಧ್ಯಾನ ಮಾಡಿ ಮಂತ್ರೋಚ್ಚಾರಣೆಯಿಲ್ಲದೆ ಮೂರು ಅರ್ಘ್ಯಗಳನ್ನು ಕೊಡಬೇಕು.

ಸಂಧ್ಯಾವಂದನೆಯನ್ನು ಮಾಡುವ ಔಚಿತ್ಯವೇನೆಂದರೆ,ವೇದವು 'ಸೂರ್ಯ ಅತ್ಮಾ ಜಗತಃ ತಸ್ಥುಷಶ್ಚ' ಎಂದರೆ, ಸೂರ್ಯನಾರಾಯಣನೇ ಜಗತ್ತಿಗೆ ಮುಖ್ಯ ಸ್ವಾಮಿಯೆಂದು ಹೇಳುತ್ತದೆ.ಅವನ ಉದಯವಾಗದಿದ್ದರೆ ಪ್ರಾಣಿಗಳು ಬದುಕಲಾರವು.ಇಂತಹ ಮಹೋಪಕಾರಿಯಾದ ಸೂರ್ಯನು ಉದಯಿಸುವಾಗ ಅವನ ಪೂಜೆಯನ್ನು ಮಾಡದವರು ಆಹಾರವನ್ನು ಕೊಡುವವನ ಮೇಲೆ ಅಂತ್ಯಂತ ಪ್ರೀತಿಯನ್ನು ವ್ಯಕ್ತಪಡಿಸುವ ಪಶು,ನಾಯಿಗಳಿಗಿಂತಲೂ ಹೀನರಾಗುತ್ತಾರೆ.ನಮ್ಮ ಮನೆಗೆ ನಮ್ಮ ಉದ್ಧಾರಕ್ಕಾಗಿ ಮಹಾತ್ಮರು ಬರುವರೆಂದು ತಿಳಿದರೆ,ಅವರು ಬರುವ ವೇಳೆಗೆ ಕಾಲು ಚಾಚಿಕೊಂಡು ಮಲಗಿರದೆ, ಅವರು ಬರುವುದಕ್ಕೆ ಮುಂಚೆಯೆ ಮಹಾದ್ವಾರದ ಬಳಿಗೆ ಹೋಗಿ ಸಂಭ್ರಮದಿಂದ ಸತ್ಕಾರಮಾಡಿ ಕರೆತರುವುದು ಹೇಗೆ ಸಜ್ಜನ ಸಮ್ಮತವೋ ಹಾಗೆ,ಸಮಸ್ತ

ಪ್ರಾಣಿಗಳ ಜೀವಧಾರಕನಾದ ಸೂರ್ಯನುದಯಿಸುವಾಗ, ಮುಂಚೆಯೇ ಎದ್ದು ಸಂಭ್ರಮದಿಂದ ಸತ್ಕಾರಮಾಡುವುದು ಯುಕ್ತವಾಗಿ ತೋರುತ್ತದೆ.ಮಹಾತ್ಮರು ಮನೆಯೊಳಗೆ ಬಂದಮೇಲೆ ಮಾಡುವ ಸತ್ಕಾರದಂತೆ ಮಾಧ್ಯಾಹ್ನಿಕ ಸಂಧ್ಯಾವಂದನೆ, ಮತ್ತು ಬೀಳ್ಕೊಡುವಾಗ ಮಾಡುವ ಸತ್ಕಾರದಂತೆ ಸಾಯಂ ಸಂಧ್ಯಾವಂದನೆ, ಮನೆಗೆ ಮಹಾತ್ಮರು ಬಂದರೂ, ಮನೆಯಲ್ಲಿ ಕುಳಿತರೂ, ಮನೆಯಿಂದ ಹೊರಗೆ ಹೊರಟರೂ ಸಹ ಅವರಿಗೆ ಸತ್ಕಾರಮಾಡದ ಮನುಷ್ಯನು ಹೇಗೆ ಲೋಕದಲ್ಲಿ ಅತ್ಯಂತ ನಿಂದ್ಯನಾಗುತ್ತಾನೋ ಹಾಗೆಯೇ ತ್ರಿಕಾಲದಲ್ಲಿ ಸಂಧ್ಯಾವಂದನೆ ಮಾಡದವನು ಅತ್ಯಂತ ನಿಂದ್ಯನಾಗುತ್ತಾನೆ.ಸೂರ್ಯನಿಂದ ಉಪಕಾರವನ್ನು ಹೊಂದಿಯೂ ಅವನನ್ನು ಸತ್ಕರಿಸದ ಕಾರಣ ಕೃತಘ್ನನೂ ಆಗುತ್ತಾನೆ.'ಕೃತಘ್ನೇ ನಾಸ್ತಿ ನಿಷ್ಕೃತಿಃ' ಎಂದರೆ ಬ್ರಹ್ಮಹತ್ಯಾದಿ ಪಾಪಮಾಡಿದವನು ಪ್ರಾಯಶ್ಚಿತ್ತದಿಂದ ಶುದ್ಧನಾಗಬಹುದು.ಆದರೆ ಕೃತಘ್ನನಿಗೆ ಯಾವ ಪ್ರಾಯಶ್ಚಿತ್ತವೂ ಇಲ್ಲ ಎಂದು ಶಾಸ್ತ್ರದಲ್ಲಿ ಹೇಳಿದೆ.ಆದ್ದರಿಂದ ತ್ರಿಕಾಲ ಸಂಧ್ಯಾವಂದನೆಯನ್ನು ಮಾಡುವುದು ಅತ್ಯಂತ ಅವಶ್ಯಕ.